ಆದ್ದರಿಂದಲೇ ರಾಮಮನೋಹರ ಲೋಹಿಯಾ ಅವರು 'ಕೃಷ್ಣನದು ಸಮೃದ್ಧ ವ್ಯಕ್ತಿತ್ವದಲ್ಲಿ ಪೂರ್ಣತೆ, ರಾಮನದು ಸೀಮಿತ ವ್ಯಕ್ತಿತ್ವದಲ್ಲಿ ಪೂರ್ಣತೆ, ಶಿವನದು ಪ್ರಮಾಣಾತೀತ' ಎಂದು ಒಂದು ಕಡೆ ಹೇಳಿದ್ದಾರೆ.

ರಾಜಕೀಯ ಕಾರಣಗಳಿಗಾಗಿ ಮತ್ತು ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಕೃಷ್ಣ ಸುಳ್ಳು ಹೇಳಿಸುತ್ತಾನೆ, ಮೋಸ ಮಾಡಿ ವೈರಿಗಳನ್ನು ಕೊಲ್ಲಿಸುತ್ತಾನೆ, ಪಾಂಡವರ ಎದುರಾಳಿಗಳ ವ್ಯಕ್ತಿತ್ವವನ್ನು ವಿಘಟನೆಗೊಳಿಸಿ ಶಕ್ತಿಹೀನರನ್ನಾಗಿಸುವುದು, ಪಾಂಡವರ ಪರವಾಗಿದ್ದರೂ ಅವರ ಮಕ್ಕಳನ್ನು ಯುದ್ಧಕ್ಕೆ ಕಳುಹಿಸಿ ಅವರು ಸಾಯುವಂತೆ ಮಾಡುವುದು – ಮುಂತಾದವುಗಳನ್ನು ಮಾಡುತ್ತಾನೆ. ಅಧಿಕಾರವಿಲ್ಲದಿದ್ದರೂ ಅವನೇ ಅಧಿಕಾರದ ಪರಮ ಸ್ಥಾನದಲ್ಲಿ ನಿಲ್ಲುತ್ತಾನೆ. ಅವನಿಲ್ಲದೆ ಏನೂ ನಡೆಯುವುದಿಲ್ಲ. ಅವನೇ ಎಲ್ಲದಕ್ಕೂ ಸೂತ್ರಧಾರ. ಅವನು ಉನ್ನತ ರಾಜನೀತಿ ತಜ್ಞನೂ ಹೌದು. ಇದಕ್ಕೆ ಉದ್ಯೋಗ ಪರ್ವದಲ್ಲಿ ನಡೆಯುವ ವಿದ್ಯಮಾನಗಳೇ ಸಾಕ್ಷಿ. ಅವನು ಸಾಮಾನ್ಯ ಮನುಷ್ಯನಂತೆ ವರ್ತಿಸುತ್ತಾನೆ. ದೇವರಾಗಿಯೂ ಕಾಣಿಸುತ್ತಾನೆ. ಇದಕ್ಕೆ ಅನೇಕ ಪ್ರಸಂಗಗಳನ್ನು ಉದಾಹರಣೆಯಾಗಿ ನೀಡಬಹುದು. ಕೃಷ್ಣನ ಪಾತ್ರವನ್ನು ಕುರಿತು ವಿ. ಸೀತಾರಾಮಯ್ಯನವರು ಈ ರೀತಿ ಹೇಳುತ್ತಾರೆ, "ಆತನೇ ಮಹಾಭಾರತಕ್ಕೆ ಸೂತ್ರಧಾರ; ಕತೆಯ ಒಬ್ಬನೇ ನಾಯಕ; ಎಲ್ಲ ಚೈತನ್ಯಗಳಿಗೂ ಮೂಲ; ಎಲ್ಲ ಪ್ರವೃತ್ತಿಗಳಿಗೂ ಕಾರಣ; ಎಲ್ಲ ಪ್ರಯತ್ನಗಳ ಗುರಿ; ಎಲ್ಲ ಆಸೆಗಳ ನೆಲೆ; ಅವನಿಲ್ಲದೆ ಭಾರತವಿಲ್ಲ" ಇಂತಹ ಕೃಷ್ಣನ ಪಾತ್ರವನ್ನು ಕುಮಾರವ್ಯಾಸನು ವಿವರವಾಗಿ ಮೈದುಂಬಿ ವರ್ಣಿಸಿದ್ದಾನೆ. ನೀರಸವಾದ ಮತ್ತು ನಮ್ಮ ಕಾಲಕ್ಕೆ ಬೇಡವಾದ ವಿಚಾರಗಳನ್ನೊಳಗೊಂಡಿರುವ ಪದ್ಯಗಳನ್ನು ಕೈ ಬಿಟ್ಟು ತುಂಡುಗೆಡೆಯದಂತೆ ಹನೂರರು ಸಂಗ್ರಹಿಸಿದ್ದಾರೆ. ಇದರಿಂದ ಶುದ್ಧ ಕಾವ್ಯವನ್ನು ಓದುಗರಿಗೆ ಕೊಡಲು ಸಹಾಯಕವಾಗಿದೆ.

ಇಂದಿನ ರಾಜಕೀಯವು ಸಾಮಾಜಿಕ, ಆರ್ಥಿಕ ಚಟುವಟಿಕೆಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ಯಾವುದೇ ಸಣ್ಣ ಕೆಲಸವಾದರೂ ಅದು ರಾಜಕೀಯ ವ್ಯಕ್ತಿಗಳಿಂದಲೇ ಪೂರ್ಣಗೊಳ್ಳಬೇಕು. ಬಡವರು ಸದಾ ರಾಜಕಾರಣಿಗಳ ಕೃಪಾಕಟಾಕ್ಷದಲ್ಲಿಯೇ ಇರಬೇಕು. ಎಲ್ಲ ಆರ್ಥಿಕ ಚಟುವಟಿಕೆಗಳು ಸಾಮಾಜಿಕ, ಸಾಂಸ್ಕೃತಿಕ ಆಗುಹೋಗುಗಳು ರಾಜಕಾರಣಿಗಳ ಮರ್ಜಿಯಲ್ಲಿಯೇ ನಿರ್ಮಾಣವಾಗಬೇಕು ಅಥವಾ ಅನುಷ್ಠಾನಕ್ಕೆ ಬರಬೇಕು. ರೈತರ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದುಕೊಳ್ಳುತ್ತವೆ. ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ರೈತನ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿಯೂ ರಾಜಕಾರಣಿಗಳ ಸ್ವಾರ್ಥದ ಮೇಲೆಯೇ ನಿಂತಿರುತ್ತದೆ. ಜನರು ನಮ್ಮ ಸಮಸ್ಯೆಗಳನ್ನು ಬಗೆಹರಿಸಬಹುದೆಂಬ ಆಶಾಭಾವದಿಂದ ಮತ್ತೊಂದು ಪಕ್ಷವನ್ನು ಅಧಿಕಾರಕ್ಕೆ ತಂದರೆ ಅವರೂ ಸಹ ಹಿಂದಿನವರಂತೆಯೇ ಸ್ವಾರ್ಥ ರಾಜಕಾರಣವನ್ನೇ ಮಾಡುತ್ತಾರೆ. ಪಕ್ಷಗಳು ಬದಲಾಗುತ್ತವೆ ಆದರೆ ವ್ಯವಸ್ಥೆ ಹಾಗೆಯೇ ಉಳಿದುಕೊಳ್ಳುತ್ತದೆ. ಈ ವಿಚಾರಗಳನ್ನೊಳಗೊಂಡ ಪದ್ಯಗಳನ್ನು ಇಲ್ಲಿ ಕೊಡಲಾಗಿದೆ. ಇವುಗಳನ್ನು ಓದಿ ಓದುಗರು ಧ್ವನಿ ಮತ್ತು ವ್ಯಂಗ್ಯವನ್ನು ಗುರುತಿಸಿ ವಿವರಿಸಿಕೊಂಡು ಸಮಕಾಲೀನ ಸಂದರ್ಭಕ್ಕೆ ಅನ್ವಯಿಸಿ ಅರ್ಥೈಸಿಕೊಳ್ಳಬಹುದು.

"ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು
ಉರಿವುರಿವುತಿದೆ ದೇಶ ನಾವಿ
ನ್ನಿರಲು ಬಾರದೆನುತ್ತ ಜನ ಬೇ